## ಪಾಮೆಣ್ಣೆ ಆಮದು 4 ವರ್ಷ ಗರಿಷ್ಠ ಮಟ್ಟಗಕ್ಕೇರುವ ಸಾಧ್ಯತೆ

ಈ ವರ್ಷ ಭಾರತದ ಪಾಮೆಣ್ಣೆ ಆಮದು 16 ಶೇಕಡಾ ಹೆಚ್ಚಳವಾಗಿ 9.17 ಮಿಲಿಯನ್‌ಗಳಿಗೇರಿ ಹಿಂದಿನ 4 ವರ್ಷಗಳ ಗರಿಷ್ಠ ಮಟ್ಟಕೇರುವ ಸಾಧ್ಯತೆಯಿದೆಯೆನ್ನಲಾಗಿದೆ. ಇತರ ಪರ್ಯಾಯ ಪ್ರತಿಸ್ಪರ್ಧಿ ಖಾದ್ಯತೈಲಗಳಿಗೆ ತುಲನೆಮಾಡಿದಾಗ ಪಾಮೆಣ್ಣೆ ದರ ಕಡಿಮೆಯಿರುವುದು ಆಮದು ಹೆಚ್ಚಳಕ್ಕೆ ಕಾರಣವಾಗಬಹುದೆನ್ನಲಾಗಿದೆ. ದೇಶೀಖಾದ್ಯತೈಲ ಉತ್ಪಾದಕರಿಗೆ, ರೈತರಿಗೆ ನೆರವಾಗಲು ಸರಕಾರ ಪಾಮೆಣ್ಣೆ ಆಮದು ಸುಂಕ ಹೆಚ್ಚಿಸುವ ಸಾಧ್ಯತೆಯಿದೆಯೆನ್ನಲಾಗಿದೆ.

## 2022 ಏಪ್ರಿಲ್‌ನಿಂದ ಡಿಸೆಂಬರ್ ಅವಧಿ, ಭಾರತದ ನೀರುಳ್ಳಿ ರಫ್ತು 49 ಶೇಕಡಾ ಹೆಚ್ಚಳ

2022 ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ಭಾರತದಿಂದ ನೀರುಳ್ಳಿ ರಫ್ತು 49 ಶೇಕಡಾ ವೃದ್ಧಿಯೊಂದಿಗೆ 1.72 ಮಿಲಿಯನ್ ಟನ್ ಗೇರಿ ಡಾಲರ್ ಗಳಿಕೆಯಲ್ಲಿ 15 ಶೇಕಡ ಹೆಚ್ಚಳ ($ 394 ಮಿಲಿಯನ್) ವಾಗಿದೆಯೆನ್ನಲಾಗಿದೆ.  ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ನೀರುಳ್ಳಿಗೆ ಬೇಡಿಕೆ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. 2021–2022 ರಲ್ಲಿ $460 ಮೌಲ್ಯದ ನೀರುಳ್ಳಿ ರಫ್ತು ಮಾಡಲಾಗಿದೆಯೆನ್ನಲಾಗಿದೆ. ಬಾಂಗ್ಲಾದೇಶ, ಮಲೇಶಿಯಾ, ಸಂಯುಕ್ತ ಅರಬ್ ದೇಶ, ಶ್ರೀಲಂಕಾ, ನೇಪಾಳ, ಇಂಡೋನೇಶಿಯಾ, ಕತಾರ್ ವಿಯೇಟ್ನಾಂ, ಓಮನ್, ಕುವೈಟ್, ಸಿಂಗಾಪುರ, ಸೌದಿಅರೇಬಿಯಾ, ಬಹಾರಿನ್, ಮಾಲ್ದೀನ್ಸ್ ಮತ್ತು ಮಾರಿಶಸ್ ಪ್ರಮುಖ ಆಮದು ದೇಶಗಳಾಗಿವೆ. ಭಾರತ ಜಾಗತಿಕ ಒಟ್ಟು ನೀರುಳ್ಳಿಯ ಕಾಲಂಶ ಉತ್ಪಾದಕ ದೇಶವಾಗಿದ್ದು ನೇದರ್‌ಲೇಡ್ಸ ಹಾಗೂ ಮೆಕ್ಸಿಕೋ ನಂತರದ 3ನೇ ಬೃಹತ್ ರಫ್ತು ದೇಶವಾಗಿದೆ. ರಫ್ತು ಬೇಡಿಕೆ ಉತ್ತಮವಿದ್ದು ರಫ್ತು ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## 713 ಲಕ್ಷ ಟನ್ ಖಾರಿಫ್ ಭತ್ತ ಖರೀದಿ

ಭಾರತದಲ್ಲಿ ಈ ವರ್ಷ ಮಾರ್ಚ್ 1ರ ತನಕ 713 ಲಕ್ಷ ಟನ್ ಭತ್ತ 1,49,960 ಕೋಟಿ ಬೆಂಬಲ ಬೆಲೆಯಲ್ಲಿ ರೈತರಿಂದ ಖರೀದಿಸಲಾಗಿದೆಯೆನ್ನಲಾಗಿದೆ. ಇದರಿಂದ ಸುಮಾರು 1 ಕೋಟಿ ರೈತರಿಗೆ ಪ್ರಯೋಜನವಾಗಿದೆಯೆನ್ನಲಾಗಿದೆ. ಇದುವರೆ ಸೆಂಟ್ರಲ್ ಪಾಲ್‌ಗೆ 246 ಲಕ್ಷ ಟನ್ ಅಕ್ಕಿ ಪೂರೈಕೆಯಾಗಿದೆಯೆನ್ನಲಾಗಿದೆ. ರಾಬಿ ಬೆಳೆಯಿಂದ 158 ಲಕ್ಷ ಟನ್ ಭತ್ತ (106 ಲಕ್ಷ ಟನ್ ಅಕ್ಕಿಯಾಗುವಷ್ಟು ) ಖರೀದಿಯಾಗುಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಇದರೊಂದಿಗೆ 2022–23 ರಲ್ಲಿ ಒಟ್ಟು ಭತ್ತ ಖರೀದಿ 900 ಲಕ್ಷ ಟನ್‌ಗಳಾಗಬಹುದೆನ್ನಲಾಗಿದೆ.

## ಅಧಿಕ ಪೂರೈಕೆಯಿಂದ ಅರಸಿನ, ಜೀರಿಗೆ ದರ ಇಳಿಕೆ, ಕೊತ್ತಂಬರಿ ದರ ಹೆಚ್ಚಳ

ಅಧಿಕ ಪೂರೈಕೆಯಿಂದ ಅರಸಿನ, ಜೀರಿಗೆ ಫ್ಯೂಚರ್ ದರ ಇಳಿಕಯಾಗಿದೆ. ಅರಸಿನ ದರ 0.7 ಶೇಕಡಾ ಹಾಗೂ ಜೀರಿಗೆ ಕ್ವಿಂಟಾಲ್‌ಗೆ ರೂ.200 ದರ ಇಳಿಕೆಯಾಗಿದೆ. ಅಧಿಕ ತಾಪಮಾನದಿಂದ ರಾಜಸ್ತಾನದ ರಾಬಿ ಕೊತ್ತಂಬರಿ ಬೆಳೆಯ ಫಸಲು ಇಳಿಕೆಯಾಗುವ ನಿರೀಕ್ಷೆ, ರಮ್ಜಾನ್ ಹಬ್ಬದ ಸಾಲುವಾಗಿ ಹೆಚ್ಚಿದ ಬೇಡಿಕೆಯಿಂದ ಕೊತ್ತಂಬರಿ ಫ್ಯೂಚರ್ ದರ 0.8 ಶೇಕಡಾ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ.